ಹೊರಡುವ, ಬಾ' ಅಂದ ಸಂಜಯ್.

ಆಶಾ ಹೆಚ್ಚು ಮಾತನಾಡದೆ ಹೊರಟಳು.

ಹಿಂದಿನ ದಿನ ಸಂಜಯ್ ಹೇಳಿದ್ದನ್ನು ಕೇಳಿದ ಮೇಲೆ ಆಶಾಳಿಗೆ ಸ್ವಲ್ಪ ಗಾಬರಿಯಾಗಿತ್ತು. ಅವಳ ದೃಷ್ಟಿಯಲ್ಲಿ ಸಂಜಯ್ ಕೇವಲ ಪೇಟೆ ಹುಡುಗ, ಏನೂ ಗೊತ್ತಿಲ್ಲದ, ಕಾಡು ಪ್ರಾಣಿಗಳಿಗೆ ಹೆದರುವವ ಹೆದರುಪುಕ್ಕಲ ಎಂಬ ಭಾವ ಇತ್ತು. ಆದರೆ ನಿನ್ನೆ ಸಂಜಯ್ ಹೇಳಿದ ಕಥೆಯಿಂದ ಅವನು ಇಡೀ ಜಗತ್ತಿನಲ್ಲೇ ಪ್ರಸಿದ್ಧ ಮತ್ತೆ ಲಕ್ಷಾಂತರ ಜನಕ್ಕೆ ಗೊತ್ತಿರುವ ವ್ಯಕ್ತಿ ಎಂದು ಗೊತ್ತಾಗಿತ್ತು. ಸಂಜಯ್ ತನ್ನ ವಿಶ್ವರೂಪ ದರ್ಶನ ಮಾಡಿಸಿದ್ದ. ಆಶಾಳಿಗೆ ಸಂಜಯನ ಮೇಲಿದ್ದ ಹಿಂದಿನ ಸಲುಗೆ ಈಗ ಸ್ವಲ್ಪ ಕಡಿಮೆಯಾಗಿತ್ತು.

'ಏನು ಆಶಾ, ಇವತ್ತು ನಿನ್ನ ರೇಡಿಯೊ ಬಂದ್ ಆಗಿದೆ?' ಸಂಜಯ್ ಕೇಳಿದ.

ಆಶಾ ಸ್ವಲ್ಪ ತುಂಟ ನಗೆ ಬೀರುತ್ತಾ 'ಟಿ.ವಿ. ಬಂದ ಮೇಲೆ ರೇಡಿಯೊ ಯಾರು ಕೇಳ್ತಾರೆ ಹೇಳಿ?' ಅಂದಳು.

ಸಂಜಯ್ ನಕ್ಕ. 'ಇದು ಲೈವ್ ಟಿ.ವಿ' ಅಂದ.

ಆಶಾಳಿಗೆ ಅರ್ಥ ಆಗಲಿಲ್ಲ. ಸಂಜಯ್ ಅವಳಿಗೆ 'ಲೈವ್ ಶೋಗಳ ಬಗ್ಗೆ ಹೇಳುತ್ತಾ ಟಿ.ವಿ.ಗಳಲ್ಲಿ ಬರುವ 'ಬಿಗ್ ಬಾಸ್', 'ಹೂ ವಾಂಟ್ಸ್ ಟು ಬಿ ಮಿಲಿಯನೇರ್' ಇತ್ಯಾದಿ ಶೋಗಳ ಬಗೆಗೆ ಹೇಳಿದ.

'ಸೀತಾಪುರ ಈಗ ಇಡೀ ಜಗತ್ತಿನ ಎದುರು ಲೈವ್ ಶೋ ಮಾಡುತ್ತಿದೆ' ಅಂದ.

'ಅದು ಹೇಗೆ?' ಆಶಾ ಕೇಳಿದಳು.

ಸಂಜಯ್ 'ಇದು ಪರಿವರ್ತನೆಯ ಲೈವ್ ಶೋ, ಅಭಿವೃದ್ಧಿಯ ಲೈವ್ ಶೋ – ಬಿಗ್ ಬಾಸ್‌ನ ತರಹ ಒಂದು ಮನೆಯೊಳಗಿನ ನಾಟಕ ಅಲ್ಲ. ಇದು ನಿಜಕ್ಕೂ ಲೈವ್. ಇದರಿಂದ ಜನರ ಜೀವನ ಬದಲಾಗುತ್ತದೆ. ಹೊರಗಿನ ಪ್ರಪಂಚಕ್ಕೆ ಸೀತಾಪುರದಲ್ಲಿರುವ ವಿಶೇಷತೆಗಳು ಗೊತ್ತಾಗುತ್ತದೆ' ಹೀಗೆನ್ನುತ್ತಾ ತನ್ನ ಸಂಪೂರ್ಣ ಎರಡು ತಿಂಗಳ ಪರಿವರ್ತನೆಯ ರೂಪರೇಖೆಯನ್ನು ತೆರೆದಿಟ್ಟ.

ಸಂಜಯ್ ಈಗ ಇಡೀ ಸೀತಾಪುರವನ್ನೇ ತನ್ನ ಪ್ರಯೋಗಶಾಲೆಯಾಗಿ ಮಾಡುವ ಯೋಚನೆಯಲ್ಲಿದ್ದ. ಸೀತಾಪುರವೇ 'ಬಿಗ್ ಬಾಸ್' ಮನೆಯಾಗಬೇಕು. ಸೀತಾಪುರದಲ್ಲಿರುವ ಎಲ್ಲರೂ ಆ ಲೈವ್ ಶೋನಲ್ಲಿ ಭಾಗಿಯಾಗಬೇಕು. 'ಬಿಗ್ ಬಾಸ್' ಎನ್ನುವುದು ಟಿ.ವಿ.ಯಲ್ಲಿ ನಡೆಯುವ ಕಾರ್ಯಕ್ರಮ ಇದ್ದರೆ ಈ ಕಾರ್ಯಕ್ರಮ ಸೋಶಿಯಲ್ ಮೀಡಿಯಾ, ಅಂದರೆ, ಫೇಸ್ ಬುಕ್, ಇನ್ಸ್ಟಾಗ್ರಾಮ್, ಟ್ವಿಟ್ಟರ್ ಇತ್ಯಾದಿ ಮೀಡಿಯಾದಲ್ಲಿ ಆಗಬೇಕು.

ಆಶಾ ಸಂಪೂರ್ಣ ಮೌನವಾದಳು. ಅವಳಿಗೆ ಏನು ಹೇಳಬೇಕೋ ಗೊತ್ತಾಗಲಿಲ್ಲ. ಸೀತಾಪುರವನ್ನು ಹೀಗೆ ಎರಡು ತಿಂಗಳಲ್ಲಿ ಪರಿವರ್ತನೆ ಮಾಡಲು ಸಾಧ್ಯವೇ? ಒಂದು ವೇಳೆ ಸಾಧ್ಯವಾದರೂ ಹೀಗೆ ಮಾಡುತ್ತಿರುವುದು ಸರಿಯೇ?

ಸಂಜಯ್ ಮೌನ ಮುರಿದು 'ಆಶಾ, ಏನು ಆಲೋಚನೆ ಮಾಡ್ತಾ ಇದ್ದೀ?' ಕೇಳಿದ.

### ಕಳೆದ ಸಂಚಿಕೆಯಲ್ಲಿ



ಊರನ್ನು ಪ್ರವಾಸಿಗರ ಆಕರ್ಷಕ ತಾಣವನ್ನಾಗಿ ಬದಲಿಸುವ ಸಂಜಯನ ಯೋಜನೆ ತಮಗೆಷ್ಟು ಪ್ರಯೋಜನ ತರಲಿದೆ ಎನ್ನುವುದರ ಬಗ್ಗೆ ಶೆಟ್ಟರು ಮತ್ತು ಆನಂದಣ್ಣ ಯೋಚಿಸತೊಡಗಿದರು. ಗೋಂಕುರು ಕಪ್ಪೆಯನ್ನು ನೋಡಿ ಮಳೆ ಬರುತ್ತದೆಂದು ಹೇಳಿದ ಆಶಾಳ ಪ್ರಾಕೃತಿಕ ತಿಳಿವಳಿಕೆಯ ಬಗ್ಗೆ ಸಂಜಯನಿಗೆ ಆಶ್ಚರ್ಯವಾಯಿತು. ಸಂಜಯನ ಹಿನ್ನೆಲೆ ತಿಳಿದು ಶಾಸ್ತ್ರಿಗಳು ಮೆಚ್ಚಿಕೊಂಡರು. ಆದರೆ, ಪ್ರಕೃತಿಯನ್ನು ಅದರ ಪಾಡಿಗೆ ಬಿಡದ ಮನುಷ್ಯನ ಸ್ವಾರ್ಥದ ಬಗ್ಗೆ ಅವರು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. ಅತಿ ಆಸೆ ಮನುಷ್ಯನ ನೆಮ್ಮದಿ ಹಾಳುಮಾಡುತ್ತದೆ ಎನ್ನುವ ಅವರ ಮಾತು ಸಂಜಯನಿಗೆ ಒಪ್ಪಿಗೆಯಾಗಲಿಲ್ಲ. ಆ ರಾತ್ರಿ ಸಂಜಯನಿಗೆ ಅಸಾಧ್ಯ ಹೊಟ್ಟೆನೋವು ಕಾಣಿಸಿಕೊಂಡಿತು. ಶಾಸ್ತ್ರಿಗಳ ಮದ್ದಿನಿಂದಾಗಿ ರಾತ್ರಿಯೆಲ್ಲ ಪಾಯಿಖಾನೆಗೆ ಅಲೆಯುವಂತಾಯಿತು. ರೋಗ ಲಕ್ಷಣದ ಬದಲಿಗೆ, ರೋಗಮೂಲವನ್ನು ಶಮನಗೊಳಿಸುವುದು ನಿಜವಾದ ವೈದ್ಯ ಎನ್ನುವ ಶಾಸ್ತ್ರಿಗಳ ಮಾತು ಸಂಜಯನಿಗೆ ವಿಶೇಷವಾಗಿ ಕಾಣಿಸಿತು.

ಆಶಾ 'ನೋಡಿ, ಇದೆಲ್ಲಾ ಆಗಿ ಹೋಗುವ ವಿಷಯವೇ? ಅಂತ ಕಾಣ್ತಿದೆ. ಅದೂ ಒಂದು ವೇಳೆ ಸಾಧ್ಯವಾದರೂ ನನ್ನ ಅಜ್ಜನಿಗೆ ನಿಮ್ಮ ದಾರಿ ಸರಿಕಾಣುವುದಿಲ್ಲ. ನಿನ್ನೆಯೇ ಅವರು ತಮ್ಮ ಅಭಿಪ್ರಾಯ ಹೇಳಿದರಲ್ಲ' ಅಂದಳು.

ಸಂಜಯ್, 'ನೋಡು ಆಶಾ, ಮೊದಲಿಗೆ ಇದು ಸಾಧ್ಯವೇ ಎನ್ನುವ ಮಾತು. ನಾನು ನಿನ್ನೆಯೇ ಹೇಳಿದೆನಲ್ಲ – ನಾನು ಈಗಾಗಲೇ ಎರಡು ಜಾಗದಲ್ಲಿ ಇದನ್ನು ಮಾಡಿ ತೋರಿಸಿಯಾಗಿದೆ. ಇದು ನನ್ನ ಮೂರನೇ ಎಪಿಸೋಡ್! ಇನ್ನು ಇದರಿಂದ ತೊಂದರೆ ಇದೆಯೋ ಇಲ್ಲವೋ ಎನ್ನುವ ಸಂಶಯ ತಾನೇ? ಇಲ್ಲಿ ಕೇಳು. ಇವತ್ತು ನಾನು ಸೀತಾಪುರಕ್ಕೆ ಪ್ರಪಂಚವನ್ನು ಪರಿಚಯಿಸದಿದ್ದರೂ ನಾಳೆ ಅದು ತನ್ನಷ್ಟಕ್ಕೇ ಪರಿಚಯಿಸಲ್ಪಡುತ್ತದೆ. ಅಮೆಜಾನ್ ಕಾಡುಗಳಲ್ಲೂ ಆಫ್ರಿಕಾದ ನಿರ್ಗಮ ಜಾಗಗಳಲ್ಲೂ ಹೊಸ ಯುಗ ಪ್ರಾರಂಭ ಹೀಗೆ ಆದದ್ದು. ಅದರ ಮುಂದೆ ಈ ಸೀತಾಪುರ ಏನು ಮಹಾ? ನಾನು ನಾಳೆಯಾಗುವುದನ್ನು ಇವತ್ತು ಮಾಡುತ್ತಿದ್ದೇನೆ ಅಷ್ಟೇ. ಈಗಿನ ಯುಗದಲ್ಲಿ ಹೊರಗಿನ ಪ್ರಪಂಚದಿಂದ ಯಾರೂ ದೂರ ಉಳಿಯಲು ಸಾಧ್ಯವಿಲ್ಲ' ಅಂದ.

ಆಶಾಳಿಗೆ ಇದು ಸರಿ ಕಂಡಿತು. ಇಬ್ಬರೂ ಮಾತಾಡುತ್ತ ಗುಡ್ಡದ ತುದಿಗೆ ಬಂದರು. ಸಂಜಯ್ ತನ್ನ ಲ್ಯಾಪ್‌ಟಾಪ್ ಬಿಡಿಸಿ ಕೆಲಸ ಶುರು ಮಾಡಿದ. ನಡುವೆ ಹಲವಾರು ಫೋನ್ ಕಾಲ್‌ಗಳನ್ನು ಮಾಡಿದ್ದೂ ಆಯಿತು. ಎಲ್ಲ ಕೆಲಸ ಮುಗಿದ ಮೇಲೆ ಅವರಿಬ್ಬರೂ ಮನೆಗೆ ಹೊರಟರು. ದಾರಿಯಲ್ಲಿ ಸಂಜಯ್ ಇಂದಿನ ವಸಂತ ಪೂಜೆ ಹಾಗೂ ತಾನು ಮಾಡಲಿರುವ ಭಾಷಣದ ವಿಷಯ ಆಶಾಳಿಗೆ ಹೇಳಿದ. ಆಶಾಳಿಗೂ ದೇವಸ್ಥಾನಕ್ಕೆ ಹೋಗುವ ಮನಸ್ಸಾಯಿತು.

ಮನೆಗೆ ಬರುವಾಗ ಆನಂದಣ್ಣ ಅಲ್ಲಿ ಕಾದುಕೊಂಡಿದ್ದರು. 'ಕಾರಂತರಿಗೆ ನಮಸ್ಕಾರ' ಅಂದರು ಆನಂದಣ್ಣ.

ಆನಂದಣ್ಣನ ಜೊತೆಗೆ ಶೆಟ್ಟರ ಮನೆಯ ಹುಡುಗನೂ ಬಂದಿದ್ದ. ಸಂಜಯನನ್ನು ನೋಡಿ ಮುಜುಗರಪಡುತ್ತಾ ಕಳ್ಳರ ಹಾಗೆ ಮಾಡತೊಡಗಿದ.

'ಏನೋ ಇಲ್ಲಿ, ಏನು ಮಾಡ್ಲಿಕ್ಕೆ ಬಂದಿ?' ಸಂಜಯ್ ಕೇಳಿದ.

ಹುಡುಗ 'ಮಾವ ಕಳ್ಸಿದ್ರು. ಇವತ್ತಿನಿಂದ ನಿಮ್ಮ ಜೊತೆಯಲ್ಲಿ ಇರ್ಲಿಕ್ಕೆ ಹೇಳಿದ್ರು' ಅಂದ. ಶೆಟ್ರು ತನ್ನ ಅಳಿಯನನ್ನು ಸಂಜಯನಿಗೆ ಅಸಿಸ್ಟಂಟ್ ಆಗಿ ಇರಲಿಕ್ಕೆ ಕಳುಹಿಸಿದ್ದರು. ಈ ಹಿಂದೆ ಸಂಜಯ್ ಮೇಲೆ ಬೇಹುಗಾರಿಕೆ ಮಾಡಿ ಆಶಾಳ ಕೈಯಲ್ಲಿ ಸಿಕ್ಕಿ ಬೈಗುಳ ತಿಂದದ್ದು ಅವನಿಗೆ ಸರೀ ನೆನಪಿತ್ತು.

'ಏನೋ ನಿನ್ನ ಹೆಸರು?' ಸಂಜಯ್ ಕೇಳಿದ.

'ಪ್ರಭಾಕರ ಅಂತ, ಎಲ್ಲರೂ ನನ್ನನ್ನು 'ಪೊಂಕು' ಅಂತ ಕರೀತಾರೆ' ಅಂದ.

ಆನಂದಣ್ಣನ ಮುಖದಲ್ಲಿ ನಗು ಬಂತು. ಪೊಂಕು ಅಂತ ಹೇಳ್ಬೇಡವೋ... ನಿನ್ನ ಅಪ್ಪ ಅಮ್ಮ ಅಷ್ಟು ಚಂದದ ಪ್ರಭಾಕರ ಹೇಳುವ ಹೆಸರಿಟ್ಟಿದ್ದಾರೆ ಎಂದ ಮೇಲೆ... ಅಂದರು.

ಆಮೇಲೆ 'ಕಾರಂತರೇ, ಹುಡುಗ ನಿಮ್ಮೊಂದಿಗಿದ್ದು ನಿಮ್ಮ ಸಾಂಗತ್ಯದಿಂದ ಏನೋ ಒಂದಿಷ್ಟು ಕಲೀತಾನೆ ಅಂತ ಶೆಟ್ರ ಆಲೋಚನೆ' ಅಂದರು.

'ಸರಿ, ಆನಂದಣ್ಣ, ನನಗೂ ಒಬ್ಬ ಕ್ಯಾಮೆರಾಮನ್ ಬೇಕಾಗಿತ್ತು. ಅವನಿಗೆ ಸ್ವಲ್ಪ ಕ್ಯಾಮೆರಾ ಹಿಡಕೊಳ್ಳಲು ಕಲಿಸ್ತೇನೆ' ಎನ್ನುತ್ತಾ ಸಂಜಯ್ ಹುಡುಗನ ಬೆನ್ನು ತಟ್ಟಿ ತನ್ನ ಕ್ಯಾಮೆರಾವನ್ನು ಅವನ ಕೈಗಿತ್ತ. ಆಮೇಲೆ ಅದನ್ನು ಹೇಗೆ ಉಪಯೋಗಿಸುವುದು ಇತ್ಯಾದಿಯ ಬಗ್ಗೆ ವಿವರಿಸಿದ.

ಹುಡುಗನಿಗೆ ಖುಷಿಯೋ ಖುಷಿ. ಈವರೆಗೆ ಇಂತಹ ಕ್ಯಾಮೆರಾ ಅವನು ನೋಡಿರಲಿಲ್ಲ. ಅಷ್ಟರಲ್ಲಿ ಆಶಾ ತಯಾರಾಗಿ ಬಂದಳು. ಆಶಾಳನ್ನು ನೋಡಿದ ಹುಡುಗ ಪುನಃ ಕಳ್ಳರ ಹಾಗೆ ಮಾಡತೊಡಗಿದ. ಸಂಜಯ್ ಅವನಿಗೆ 'ಮುಜುಗರ ಯಾಕೋ' ಎಂದು ಹೇಳಿ ಆಶಾಳ ಹತ್ತಿರ ಅವನ ಬಗ್ಗೆ ಹೇಳಿದ.

'ಏನೋ, ಹಿಂದಿನ ಹಾಗೆ ಕಾರಂತರ ಹಿಂದೆ ಬಿದ್ದು ನನ್ನ ಹತ್ತಿರ ಕಲ್ಲಿನ ಏಟು ತಿನ್ನಲಿಕ್ಕೆ ಉಂಟಾ?'